VIJAYAKUMAR KANNUR Digitally signed by VIJAYAKUMAR KANNUR Date: 2025.10.28 17:17:25 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 28.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 8 ಮತ್ತು 9 ರವರ ಪರ ಶ್ರೀ ಟಿ ಟಿ ಎಂ ವಕೀಲರಿಂದ :</u>**

ಈ ದಾವೆಯಲ್ಲಿ ಪ್ರತಿವಾದಿ 1 ರಿಂದ 7 ರವರು ತಮ್ಮ ಪರವಾಗಿ ಲಿಖಿತ ಪತ್ರ ಸಲ್ಲಿಸಿರುವರು. ಈ ಪ್ರತಿವಾದಿಯರು ತಮ್ಮ ಲಿಖಿತ ಪತ್ರದಲ್ಲಿ ನಾನು ವಾದ ಪತ್ರದ ಜೊತೆ ಲಗತ್ತಿಸಿರುವ ಅನೂಚಿತ 'ಎ' ದ ವಂಶಾವಳಿ ಸಂಪೂರ್ಣ ಸುಳ್ಳಿನಿಂದ ಕೂಡಿರುವುದಾಗಿ ಎಂದು ನಮೂದು ಮಾಡಿರುವರು ಎಂದರೆ ಅದು ನಿಜವಿರುವುದಿಲ್ಲ ಎಂದು ಸಾಕ್ಷಿ ಉತ್ತರಿಸುವರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದಿ 8 ಮತ್ತು 9 ರವರು ಮೃತ ವಿಜಯಕುಮಾರನ ಮಕ್ಕಳು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಇತ 15 ವರ್ಷದವನಿದ್ದಾಗ ಮನೆ ಬಿಟ್ಟು ಹೋಗಿರುವನು, ಆತ ವಿವಾಹವಾಗಿರುವನೋ ಅಥವಾ ಇಲ್ಲವೋ ಎಂದು ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಆದ್ದರಿಂದ ಈ ಪ್ರತಿವಾದಿ 8 ಮತ್ತು 9 ರವರು ಬಗ್ಗೆ ತಮಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ವಿಜಯಕುಮಾರ ಮನೆ ಬಿಟ್ಟು ಹೋದ ವಿಷಯ ನನಗೆ ನನ್ನ ತಂದೆಯ ಮೂಲಕ ಗೊತ್ತಾಗಿರುವುದು. ವಿಜಯಕುಮಾರ ವಿವಾಹವಾಗದೇ ಮೃತ ಪಟ್ಟಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಹಿಡಲಕ ಗ್ರಾಮದಲ್ಲಿ ದರೇಪ್ಪ ಸೈದಾಪೂರ ಎಂಬ ನಮ್ಮ ಸಂಬಂಧಿಗಳು ಇರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ವಾದ ಪತ್ರದಲ್ಲಿ ಕಾಣಿಸಿರುವ ವಂಶಾವಳಿಯ ಮೂಲ ಪುರುಷನ ಹೆಂಡತಿಯಾದ ಸುಶೀಲಾಬಾಯಿ ಮತ್ತು ದರೇಪ್ಪನ ಹೆಂಡತಿ ಖಾಸ ಸಹೋದರಿಯರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ವಿಜಯಕುಮಾರ ದರೇಪ್ಪ ಸೈದಾಪೂರನ ಹತ್ತಿರ ಇದ್ದನು ಎಂದರೆ

ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಹಿಡಕಲ ಗ್ರಾಮದಲ್ಲಿ ವಿಜಯಕುಮಾರ ಪರಿಶಿಷ್ಟ ಜಾತಿಯ ಮಹಿಳೆಯಾದ ಯಲ್ಲವ್ವಳ ಜೊತೆ ವಿವಾಹ ಮಾಡಿಕೊಂಡಿರುವನು ಎಂದರೆ ಸರಿಯಲ್ಲ. ನಮ್ಮದು ಉಪ್ಪಾರ ಸಮಾಜ ಎಂದರೆ ಸರಿ. ವಿಜಯಕುಮಾರ ಪರಿಶಿಷ್ಟ ಜಾತಿಯ ಮಹಿಳೆಯನ್ನು ವಿವಾಹ ಮಾಡಿಕೊಂಡ ಕಾರಣಕ್ಕಾಗಿ ನಾವು ಮತ್ತು ಪ್ರತಿವಾದಿ 1 ರಿಂದ 7 ರವರು ವಿಜಯಕುಮಾರನನ್ನು ಕಡೆಗಣಿಸಿದ್ದೇವೆ ಎಂದರೆ ಸರಿಯಲ್ಲ. ವಿಜಯಕುಮಾರನನ್ನು ಕುಮಾರ ಎಂಬ ಇನ್ನೊಂದು ಹೆಸರಿನಿಂದಲೂ ಕರೆಯುತ್ತಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ವಿಜಯಕುಮಾರ ತನ್ನ ಜೀವಿತಾವಧಿಯಲ್ಲಿ ಹಿಡಕಲ ಗ್ರಾಮದ ವಿಳಾಸದಲ್ಲಿ ಆಧಾರ ಗುರುತಿನ ಚೀಟಿ ಮತ್ತು ಚುನಾವಣೆ ಗುರುತಿನ ಚೀಟಿಯನ್ನು ಹೊಂದಿದ್ದನು ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ.

4. ವಿಜಯಕುಮಾರ ದಿಃ 23.07.1960 ರಲ್ಲಿ ಬೆಳಗಲಿ ಗ್ರಾಮದಲ್ಲಿ ಜನ್ಮ ತಾಳಿರುವನು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಇವರು ಬೆಳಗಲಿ ಗ್ರಾಮದ ಸರಕಾರಿ ಶಾಲೆಯಲ್ಲಿ 1 ರಿಂದ 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಪ್ರತಿವಾದಿ 8 ರವರು ಹಿಡಕಲ ಗ್ರಾಮದ ಸರಕಾರಿ ಶಾಲೆಯಲ್ಲಿ 1 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಪ್ರತಿವಾದಿ 8 ಮತ್ತು 9 ರವರು ಹಿಡಕಲ ಗ್ರಾಮದ ಖಾಯಂ ನಿವಾಸಿಗಳಾಗಿದ್ದು , ಆ ವಿಳಾಸದ ಆಧಾರ ಗುರುತಿನ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿ ಹೊಂದಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ವಿಜಯಕುಮಾರ ಅಂತರ್ ಜಾತಿಯ ವಿವಾಹ ಮಾಡಿಕೊಂಡಿರುವುದರಿಂದ ಆತನನ್ನು ನಾವು ಮತ್ತು ಪ್ರತಿವಾದಿ 1 ರಿಂದ 7 ರವರು ಕಡೆಗಣಿಸಿದ್ದು, ದಾವಾ ಆಸ್ತಿಯಲ್ಲಿ ಹಿಸ್ಸೆ ಹೋಗುತ್ತದೆ ಎಂಬ ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಪ್ರತಿವಾದಿ 8 ಮತ್ತು 9 ರವರು ಮೃತ ವಿಜಯಕುಮಾರನ ನೇರ ವಾರಸುದಾರರು ಎಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರು ದಾವಾ ಆಸ್ತಿಗಳಲ್ಲಿ ವಿಜಯಕುಮಾರನಿಗೆ ಬರುವಂತಹ ಪಾಲಿಗೆ ವಾರಸುದಾರರು ಎಂದರೆ ಸರಿಯಲ್ಲ. ನಾನು 1990 ರಲ್ಲಿ ಜನ್ಮ ತಾಳಿರುವುದರಿಂದ ಅದಕ್ಕಿಂತ ಮುಂಚಿನ ಸಂಗತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೊದಲಿನ ಸಂಗತಿಗಳ ಬಗ್ಗೆ ನನ್ನ ತಂದೆ ನನಗೆ ಮಾಹಿತಿ ನೀಡಿರುವ ಆಧಾರದ ಮೇರೆಗೆ ಸಾಕ್ಷಿ ನುಡಿಯುತ್ತಿರುವೆನು. ವಿಜಯಕುಮಾರ ಮತ್ತು ಪ್ರತಿವಾದಿ 8 ಮತ್ತು 9 ರವರ ಬಗ್ಗೆ ಸಂಪೂರ್ಣವಾದ ಮಾಹಿತಿಯು ಪ್ರತಿವಾದಿ 1 ರಿಂದ 4 ರವರಿಗೆ ಇರುವುದು ಎಂದರೆ ಸರಿಯಲ್ಲ. ವಿಜಯಕುಮಾರ 2019 ರಲ್ಲಿ ಮೃತ ಪಟ್ಟಿದ್ದರೂ ಸಹಿತ ಆತನ ಬಗ್ಗೆ ಮಾಹಿತಿ ಇರುವುದಿಲ್ಲ ಅಂತ ನಾನು ಖೊಟ್ಟಿ ರೀತಿಯಿಂದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಎಲ್ಲಾ ಸಂಗತಿಗಳು ಸಂಪೂರ್ಣವಾಗಿ ಸುಳ್ಳಿನಿಂದ ಕೂಡಿರುವವು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿ 8 ಮತ್ತು 9 ರವರಿಗೆ ಜಂಟಿಯಾಗಿ 1/6 ಹಿಸ್ಸೆ ಇರುವುದು ಎಂದರೆ ಸರಿಯಲ್ಲ. ಈ ಪ್ರತಿವಾದಿಯರಿಗೆ ಪಾಲು ಹೋಗುತ್ತದೆ ಎಂಬ ಕಾರಣಕ್ಕಾಗಿ ನಾನು ಮತ್ತು ಪ್ರತಿವಾದಿ 1 ರಿಂದ 4 ರವರು ಕೂಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.10.28 17:17:34 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ